



ಎಡದಿಂದ ಬಲಕ್ಕೆ

1. ಸತತ ಅಭ್ಯಾಸವನ್ನು ಮಾಡುವಲ್ಲಿ ಆತನಿಗೆ ಭಾರೀ ಪರಿಶ್ರಮ 4
3. ಉಸಿರಾಟದಲ್ಲೇ ತಿಳಿಯುವಂತಿದೆ ಆಕೆಯ ಸಂತಸ 3
4. ಕೆಂಡಗಳ ರಾಶಿಯನ್ನು ಕಂಡೊಡನೆ ಕಂಪಿಸುವಂಥ ಹೆದರಿಕೆಯೇ? 3
6. ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಒಳ್ಳೇ ಸಂದರ್ಭ ಬಂದಿದೆ 4
7. ನೀರ ಮೇಲಿನ ಬರಹ ಅಶಾಶ್ವತ, ಕ್ಷಣಿಕ ಕೂಡ 4
9. ತೇರಿಗೆ ಕೈ ಹಾಕುವವರ ಪಟ್ಟಿ ಕುರಿತ ಆಕ್ಷೇಪ 4
12. ನಾರದನ ಮುಂದೆ ಮನ್ಮಥನ ಶತ್ರು! 4
14. ಕಂತುಗಳನ್ನೆಲ್ಲ ತೀರಿಸುವ ವರೆಗೂ... 3
15. ಹೊರಕ್ಕೆ ಬರಲೇ ಹೆದರುವ ಹೇಡಿ ಮನುಷ್ಯ 3
16. ಹಸ್ತಕ್ಕೆ ಅಮೂಲ್ಯ ಮಣಿ ಸೇರಿಸಿದರೆ ಸಾಗರವಾದೀತೇ? 4

ಮೇಲಿನಿಂದ ಕೆಳಕ್ಕೆ

1. ಎಂಥ ಸುಂದರ ದೃಶ್ಯ! ಇದಕ್ಕೆ ಬೇರಾವ ಹೋಲಿಕೆಯೂ ಇಲ್ಲ 4
2. ರಾಜ್ಯವನ್ನೇನೂ ಕೇಳುವುದಿಲ್ಲ, ಈ 'ಅಡವಿ ಅರಸ' 4
3. ಇಂತಹ ಉದಾಸ ಭಾವ ಇದ್ದಕ್ಕಿದ್ದಂತೆ ಹುಟ್ಟಿತಲ್ಲ! 3
5. ಖಾಲಿ ಪಾತ್ರೆಯಲ್ಲಿ ಕಂಡ ಚಿತ್ರ ಈಶ್ವರ 3
6. ಅದ್ಭುತ ಭಾಗ್ಯಕ್ಕೆ ಕಾರಣನಾದವನು ಕರೆಯದೇ ಬಂದನಲ್ಲ! 4
8. ನಾರಿಯರೆಲ್ಲ ಶಪಿಸುವಂತಹ ಮಹಾ ಜಿಪುಣ 4
10. ಕಪಿಯನ್ನೇ ಕುಕ್ಕಿ ಹಾಕಿತು ನೋಡಿ ಆ ಪಾರಿವಾಳ 3
11. ಖರ್ಚಿನಲ್ಲೇ ಸಿಕ್ಕಿದರೂ ನಾಲಿಗೆಗೆ ತುಂಬ ಹಿತ 4
12. ಮರ ಹತ್ತಿ ನೋಡಿದರೆ ಕಂಡ ದೃಶ್ಯ ಚಿತ್ತಾಕರ್ಷಕ 4
13. ಕನಸಿನಲ್ಲಿ ಕಂಡದ್ದು ಇಂತಹದೇ ಮೂಗು 3

---

## 2–11–2021 ಉತ್ತರಗಳು

ಎಡದಿಂದ ಬಲಕ್ಕೆ

1. ಅರಸ 3. ವಿಧಾನ 4. ಹಾವಸೆ 6. ಶಿವಾಲಯ 7. ಭೂತಕಾಲ 9. ರಮಾಕಾಂತ 11. ಸರಂಜಾಮು 15. ತ್ವರಿತ 16. ತನಕ 17. ನದಸ (ಸದನ ತಿರುಗಾ ಮುರುಗಾ)

ಮೇಲಿನಿಂದ ಕೆಳಕ್ಕೆ


1. ಅನಲ 2. ಸಹಾಯ 3. ವಿಶಾಲ 5. ಸೆಳೆತ 6. ಶಿಶಿರ 8. ಲಗಾಮು 10. ಕಾಂತತ್ವ 12. ರಂಜಕ 13. ಪತನ 14. ಸಂತಸ

ಪ್ರಶ್ನಾಂಕಣ

# ಸಿಹಿ ತುಟಿ ಮೀನು: ವಿಶೇಷ ಏನು?

ಚುಂಬಿಸಲು ತೆರೆದು ಹಿಡಿದಿರುವಂತೆ ಕಾಣುವ, ದಪ್ಪನ್ನ ಜೋಡಿ ತುಟಿಗಳನ್ನು ಹೊಂದಿದ್ದು (ಚಿತ್ರ2, 3) ಈ ದೇಹ ಲಕ್ಷಣವನ್ನೇ ಆಧರಿಸಿದ ಹೆಸರನ್ನು ಪಡೆದಿರುವುದೇ ಸಿಹಿ ತುಟಿ ಮೀನಿನ ಪ್ರಥಮ ವಿಶೇಷ. ಅದೊಂದೇ ಅಲ್ಲದೆ ಇನ್ನೂ ಕೆಲವು ವಿಸ್ಮಯಕರ ವೈಶಿಷ್ಟ್ಯಗಳನ್ನು ಈ ಮತ್ಸ್ಯ ಪಡೆದಿದೆ.

120 ಪ್ರಭೇದಗಳಿರುವ ಸಿಹಿ ತುಟಿ ಮೀನುಗಳ ಪ್ರತಿ ಪ್ರಭೇದವೂ ಅದರದೇ ವಿಶೇಷ ಆಕಾರಗಳ, ವರ್ಣ ಸಂಯೋಜನೆಗಳ ಚರ್ಮ ಚಿತ್ತಾರಗಳನ್ನು ಹೊಂದಿರುವುದು ದ್ವಿತೀಯ ಸೋಜಿಗಮಯ ವಿಶೇಷ (ಚಿತ್ರಗಳಲ್ಲಿ ಗಮನಿಸಿ). ನೇರವಾದ, ಸೊಟ್ಟನಾದ, ಬಗೆಬಗೆಯಲ್ಲಿ ಬಾಗಿದ, ಪಟ್ಟೆಪಟ್ಟೆ ಆಕಾರದ ಗೆರೆಗಳ, ಮಚ್ಚೆಗಳ ಅಥವಾ ಬರೀ ಚುಕ್ಕಿಗಳ ನಾನಾ ವಿನ್ಯಾಸಗಳ ಈ ಚಿತ್ತಾರಗಳದು ಬಿಳಿ, ಕಪ್ಪು, ಹಳದಿ, ಹಸಿರು, ಕೆಂಪು, ಕಂದು, ಬೂದು ಮತ್ತು ಅವುಗಳ ವಿವಿಧ ಮಿಶ್ರಿತ ಬಹು ವರ್ಣಗಳ ಸಂಯೋಜನೆ; ಕಂಡೊಡನೆ ಕಣ್ಸೆಳೆದು ಬೆರಗುಗೊಳಿಸುವ ರೂಪ, ಅಲಂಕಾರ.




ಮತ್ತೊಂದು ಕುತೂಹಲಕರ ವಿಶೇಷ ಏನೆಂದರೆ, ಅಪ್ರಬುದ್ಧ ಮರಿಗಳ ಚರ್ಮ ಚಿತ್ತಾರ ಅದದೇ ಪ್ರಭೇದಗಳ ವಯಸ್ಕ ಮತ್ಸ್ಯಗಳ ಚಿತ್ತಾರಕ್ಕಿಂತ ತುಂಬ ಬೇರೆ; ಹೋಲಿಸಲೇ ಆಗದಷ್ಟು ವಿಭಿನ್ನ! ಮರಿಗಳದು ಬಹು ಗಾಢ ವರ್ಣಗಳ ಚಿತ್ತಾರ; ವಯಸ್ಕರದು ತಿಳಿ ವರ್ಣಗಳ ವೈಭವ. ಸಿಹಿ ತುಟಿ ಮೀನುಗಳು ಕಡಲಿನಲ್ಲಿ ಜೊತೆಗೆ, ಅಲ್ಪವೇ ಉಪ್ಪು ನೀರು ಬೆರೆತ ಮತ್ತು ಶುದ್ಧ ಸಿಹಿ ನೀರಿನ ನೆಲೆಗಳಲ್ಲೂ ವಾಸಿಸಬಲ್ಲ ಸಾಮರ್ಥ್ಯ. ಆದರೂ ಅವುಗಳದು ಪ್ರಧಾನವಾಗಿ ಸಾಗರವಾರದಲ್ಲೇ ಬದುಕು. ಪೆಸಿಫಿಕ್ ಮತ್ತು ಹಿಂದೂ ಮಹಾ ಸಾಗರಗಳ ಸಮಭಾಜಕದ ಆಸುಪಾಸಿನ ಬೆಚ್ಚನೆಯ ನೀರಲ್ಲಿ, ಅಂಥ ಪ್ರದೇಶಗಳಲ್ಲಿ ದಟ್ಟವಾಗಿ ಹರಡಿರುವ ಹವಳ ಸಾಮ್ರಾಜ್ಯ (ಚಿತ್ರ1) ಅವುಗಳ ಅತ್ಯಂತ ಪ್ರಶಸ್ತ ನೆಲೆ. ಹವಳ ಸಾಮ್ರಾಜ್ಯದ ಅಸಂಖ್ಯ ಸಂದುಗೊಂದುಗಳಲ್ಲಿ ಮರಿಗಳು ಒಂಟೊಂಟಿಯಾಗಿ ಅಡಗಿ ಉಳಿದು ಬೆಳೆಯುತ್ತವೆ; ಪ್ರೌಢವಾದ ಮೇಲೆ ಗುಂಪು ಗುಂಪಾಗಿ ಶತ್ರುಗಳನ್ನು ಭ್ರಮೆಗೊಳಿಸಿ ಬೆದರಿಸುವ ವ್ಯೂಹಗಳಲ್ಲಿ (ಚಿತ್ರಗಳಲ್ಲಿ ಗಮನಿಸಿ) ಸಂಚರಿಸುತ್ತ ಬಾಳುತ್ತವೆ.

30 ಅಂಗುಲ ಉದ್ದ, 1.5 ಕಿಲೋ ತೂಕ ತಲುಪುವ, 2 ರಿಂದ 10 ವರ್ಷ ಗಳ ಆಯುಷ್ಯದ ಈ ಮತ್ಸಗಳದು ಕಡಲಿನ ಕೀಟಗಳು ಮತ್ತು ಚಿಪ್ಪಿನ ಜೀವಿಗಳೇ ಪ್ರಮುಖ ಆಹಾರ.

■ ಎನ್. ವಾಸುದೇವ್